ಬೆವಿಕಂ

# ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ

(ಕರ್ನಾಟಕ ಸರ್ಕಾರದ ಸಂಪೂರ್ಣ ಸ್ವಾಮ್ಯಕ್ಕೊಳಪಟ್ಟಿದೆ)

ಕಂಪನಿ ಕಾರ್ಯಾಲಯ, ಕೆ.ಆರ್.ವೃತ್ತ, ಬೆಂಗಳೂರು – 01

BESCOM

## ಪ್ರಕಟಣೆ

ಸಂಖ್ಯೆ: ಬೆವಿಕಂ/ಬಿಸಿ44/ಇ–24/2022–23 ದಿನಾಂಕ: 3 JAN 2023

ಬೆವಿಕಂಗೆ ಸಂಬಂಧಿಸಿದ ಸಿಬ್ಬಂದಿಗಳ ಕುರಿತಾದ ಹಾಗೂ ವಿದ್ಯುತ್ ಅಪಘಾತಗಳ ಬಗ್ಗೆ ಪಾರದರ್ಶಕ ಹಾಗೂ ನಿಷ್ಪಕ್ಷಪಾತವಾದ ಇಲಾಖಾ ವಿಚಾರಣೆಯನ್ನು ನಡೆಸಬೇಕೆಂಬ ಉದ್ದೇಶದಿಂದ, **"ವಿಚಾರಣಾಧಿಕಾರಿ"** ಆಗಿ ಎರಡು ವರ್ಷಗಳ ಅವಧಿಗೆ ಗುತ್ತಿಗೆ ಆಧಾರದ ಮೇಲೆ ಸೇವೆಯನ್ನು ಪಡೆಯಲು ಈ ಕೆಳಕಂಡ ಅರ್ಹತೆಗಳುಳ್ಳ ನಿವೃತ್ತ ಅಧಿಕಾರಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

| | |
|---|---|
| 1. ನಿವೃತ್ತ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು | 10 ಸಂಖ್ಯೆ |
| 2. ನಿವೃತ್ತ ಇಂಜಿನಿಯರ್ (ಕವಿಪ್ರನಿನಿ/ಎಸ್ಕಾಂ ಹೊರತುಪಡಿಸಿ ಭಾರತಾದ್ಯಂತ ಎ–ಗುಂಪಿನಲ್ಲಿ ಸೇವೆ ಸಲ್ಲಿಸಿದ ಹಾಗೂ ವಿಚಾರಣೆಯಲ್ಲಿ ಅನುಭವವಿರುವ) | 10 ಸಂಖ್ಯೆ |
| 3. ವಯೋಮಿತಿ: ದಿನಾಂಕ: 01.01.2023 ಕ್ಕೆ 70 ವರ್ಷ ಮೀರಿರಬಾರದು. | |
| 4. ಕನ್ನಡ ಬಾಷೆಯನ್ನು ಓದಲು ಮತ್ತು ಬರೆಯುವ ಜ್ಞಾನಹೊಂದಿದವರನ್ನು ಅಪೇಕ್ಷಿಸಲಾಗಿದೆ. | |

- ನಿವೃತ್ತ ಅಧಿಕಾರಿಗಳು ಬೆಂಗಳೂರು/ಬೆವಿಕಂ ವ್ಯಾಪ್ತಿಯ (ಬೆಂಗಳೂರು ನಗರ/ಗ್ರಾಮೀಣ, ರಾಮನಗರ, ಕೋಲಾರ, ತುಮಕೂರು, ಚಿತ್ರದುರ್ಗ ಮತ್ತು ದಾವಣಗೆರೆ ಜಿಲ್ಲೆಗಳನ್ನೊಳಗೊಂಡ) ನಿವಾಸಿಗಳಾಗಿರಬೇಕು.
- ವಿಚಾರಣೆಗಾಗಿ ಬೆವಿಕಂ ವ್ಯಾಪ್ತಿಯ ಪ್ರದೇಶಗಳಿಗೆ ಪ್ರಯಾಣಿಸಲು ಹಾಗೂ ಅವಶ್ಯವಿದ್ದರೆ ತಂಗಲು ಶಕ್ತರಾಗಿರಬೇಕು.

**ಸೌಲಭ್ಯಗಳು:** ಪ್ರತಿ ಪ್ರಕರಣಕ್ಕೆ ಸಂಭಾವನೆ ಮತ್ತು ವಾಹನ ಭತ್ಯೆಯನ್ನು ನೀಡಲಾಗುವುದು [ಪ್ರತಿ ಪ್ರಕರಣಕ್ಕೆ ಸಂಭಾವನೆ: ₹15,000/– (ಪ್ರಾಥಮಿಕ ವಿಚಾರಣಾ ವರದಿ), ₹30,000/- (ಪೂರ್ಣ ವಿಚಾರಣಾ ವರದಿ), ವಾಹನ ಭತ್ಯೆ: ₹15/-(ಪ್ರತಿ ಕಿ.ಮೀ.)]

ಆಸಕ್ತ ನಿವೃತ್ತ ಅಧಿಕಾರಿಗಳು, ಕಂಪನಿಯ https://bescom.karnataka.gov.in ಜಾಲ ತಾಣದಿಂದ ನಿಗಧಿಪಡಿಸಿದ ಅರ್ಜಿ ನಮೂನೆಯಲ್ಲಿ ವಿವರಗಳನ್ನು ಭರ್ತಿಮಾಡಿ ಈ ಕೆಳಕಂಡ ವಿಳಾಸಕ್ಕೆ **ದಿನಾಂಕ: 20.01.2023 ಸಂಜೆ: 5:00 ಗಂಟೆಗೆ** ಅಥವಾ ಮುಂಚಿತವಾಗಿ ಮುದ್ದಾಂ/ಅಂಚೆ ಮೂಲಕ ಕಳುಹಿಸಬಹುದಾಗಿರುತ್ತದೆ.

**ವಿಳಾಸ:** ಪ್ರಧಾನ ವ್ಯವಸ್ಥಾಪಕರು (ಆ ಮತ್ತು ಮಾ.ಸಂ), ಬೆಳಕು ಭವನ, ಕಂಪನಿ ಕಾರ್ಯಾಲಯ, ಬೆವಿಕಂ, ಕೆ. ಆರ್. ವೃತ್ತ, ಬೆಂಗಳೂರು – 560001.

**ಇ–ಮೇಲ್:** gmadminhr@bescom.co.in,

**ದೂರವಾಣಿ ಸಂಖ್ಯೆ: 080–22354937 (ಸಮಯ: ಬೆಳಿಗ್ಗೆ 10:30 ರಿಂದ ಸಂಜೆ 5:00 ವರೆಗೆ)**

ಪ್ರಧಾನ ವ್ಯವಸ್ಥಾಪಕರು(ಆ ಮತ್ತು ಮಾ.ಸಂ) 3/1/2023
ಕಂಪನಿ ಕಾರ್ಯಾಲಯ, ಬೆವಿಕಂ,
ಬೆಂಗಳೂರು.